# EXAMINATION BRANCH-II

Following Recruitments are being made in Examination Branch-II

1. **Assistants/First Division Assistants**
2. **Sub-Inspectors of Excise**
3. **Panchayath Development Officer**

**NAME OF THE POST:-**

## I. ASSISTANTS/FIRST DIVISION ASSISTANTS:-

1. **RULES APPLICABLE:-**

This recruitment shall be made as per the Rules and Procedures laid down in the Karnataka Civil Services (Recruitment to the Ministerial Posts) Rules 1978.

2. **PAY SCALE:-**

For Assistants: ₹ 16000-400-17200-450-19000-500-21000-600-24600-700-28800-800-29600

For FDA: ₹ 14550-350-15600-400-17200-450-19000-500-21000-600-24600-700-26700

3. **AGE LIMIT**:- As per above rules candidates must have attained the age of 18 years and not attained the age of 40 years in case of a person belonging to the Scheduled Castes or Scheduled Tribes or Cat-I, and 38 years in the case of other category and 35 in the case of General Merit Candidates, on the last date fixed for the receipt of Applications.

4. **Qualification**:- As per this rules Candidate is a holder of a Bachelor's Degree or equivalent of a recognised University established by law.

5. **METHOD OF SELECTION:-**

Commission shall conduct Written Examination for eligible candidates as per the Karnataka Civil Services (Recruitment to the Ministerial Posts) Rules 1978 as amended from time to time. Based on the marks obtained in the written examination and the preference indicated by the candidates, Select list shall be prepared for available vacancies of various Department classified according to the Rules as amended from time to time.

6. **SYLLABUS FOR WRITTEN EXAMINATION:-**

The Written Examination shall consist of two papers. It shall be objective type with multiple choices

| | | | | |
|---|---|---|---|---|
| a) Paper-I : | General Knowledge | - | 150 marks | - 2 hours duration |
| b) Paper-II: | General Kannada or General English | - | 150 marks | - 2 hours duration |

II. **SUB-INSPECTORS OF EXCISE:-**

1. **RULES APPLICABLE:**-

Recruitment to the said posts has been made according to the Karnataka Excise Services (Recruitment) 1996 and (Amendment) Rules 2008

2. **PAY SCALE:-**

₹ 16000-400-17200-450-19000-500-21000-600-24600-700-28800-800-29600

3. **AGE LIMIT**:- As per above rules candidates must have attained the age of 21 years and not attained the age of 28 years in case of a person belonging to the Scheduled Castes or Scheduled Tribes or Other Backward Classes, and 26 years in the case of any Other Person, on the last date fixed for the receipt of Applications.

4. **Qualification**:- As per this rules Candidate is a holder of a Bachelor's Degree or equivalent qualification.

**Physical Standard**:- Candidate must possess the following physical standards;

| | | | For Men | For Women |
|---|---|---|---|---|
| a) | Height | - | 163 cm | 157 cm |
| b) | Weight | - | -- | 49.9 k.g. |
| c) | Chest | - | Must not be less than 81 cms round the chest on full inspiration with minimum expansion of 5 cms (For men only) | |

**Vision Test**

Distant Vision:-

| Better Eye | Worse Eye |
|---|---|
| 6/9 | 6/9 |
| or | |
| 6/9 | 6/12 |

Near Vision:-

| Better Eye | Worse Eye |
|---|---|
| 0/6 | 0/8 |

Each eye must have full field vision, colour blindness, squint or any morbid condition of the eyes or lids of either eye shall be deemed a disqualification.

**Physical Efficiency Test**:- The Physical Efficiency test shall consist of the following;

| SL NO | MEN | | | WOMEN- EXMP | |
|---|---|---|---|---|---|
| 1. | 100 Meters run | 15 Seconds | | 100 Meters run | 18.5 Seconds |
| 2. | High Jump | 1.2 Meters | | High Jump | 0.9 Meters |
| 3. | Long Jump | 3.80 Meters | | Long Jump | 2.50 Meters |
| 4. | Shot put (7.26 Kgs) | 5.60 Meters | | Shot put (4 Kgs) | 3.75 Meters |
| 5. | 800 Mtrs Run | 2 Minutes 50 Seconds | | 200 Mtrs Run | 40 Seconds |

- Candidates must pass in minimum 3 items out of 5
- No Marks are prescribed for the Physical Test, however there are qualifying eligibility test.
- The Physical Test shall be conducted by the District Surgeon and the District Youth Service Officer as members. The Deputy Commissioner of Excise of the concerned District shall be the Member Secretary of this Committee.

## 5. METHOD OF SELECTION:-

Commission shall be conducted Written Examination for eligible candidates as per the Karnataka Excise Services (Recruitment) 1996 and (Amendment) Rules 2008. Based on the basis of marks obtained in the written examination, the candidates shall be required to appear for the physical standard and efficiency test.

Qualified Candidates in Physical standard and efficiency test, on the basis of marks secured in the written examination, Selection List shall be Prepared.

6. **SYLLABUS FOR WRITTEN EXAMINATION:-**

The Written Examination shall consist of two papers of degree standards.

a)Paper-I:- shall consists of two parts. One Part on Essay writing in English or Kannada carrying 30 marks and the Second part on translation of a passage.

i)from English into Kannada and ii) from Kannada into English shall be of one and half hours duration carrying 50 marks (30 marks for Essay, 20 marks for translation). There shall be no minimum marks.

b)Paper-II :- shall consists of questions of General Studies in General Knowledge, Science, Geography, History, Constitution, National Freedom Movement and General Mental ability, to be answered in Kannada or English. It shall carry 150 marks and there shall be no minimum marks. It shall be objective type with multiple choices and of one and half hours duration.

III. **PANCHAYATH DEVELOPMENT OFFICER:-**

1. **RULES APPLICABLE:-**

Recruitment to the said posts has been made according to the Karnataka General Service (Development Branch and Local Government Branch) Recruitment of Panchayath Development Officers (Special) (Recruitment) Rules, 2009

2. **PAY SCALE:-**
   ₹ 20000-500-21000-600-24600-700-28800-800-33600-900-36300

3. **AGE LIMIT**:- As per above rules candidates must have attained the age of 18 years and not attained the age of 40 years in case of a person belonging to the Scheduled Castes or Scheduled Tribes or Cat-I, and 38 years in the case of other category and 35 in the case of General Merit Candidates, on the last date fixed for the receipt of Applications.

4. **Qualification**:- As per this rules Candidate is a holder of a Bachelor's Degree or equivalent of a recognised University established by law.

5. **METHOD OF SELECTION:-**
   Candidate should obtained 35% marks in Computer Literacy (qualifying examination). Based on the basis of marks obtained in the written examination and qualified in the Computer Literacy, candidates shall be selected. Candidates who have not qualified in the Computer Literacy shall not be considered. In the Competitive Examination total marks obtained out of 120 marks in Part-II Paper shall be considered

6. **SYLLABUS FOR WRITTEN EXAMINATION:-**

   The Written Examination shall consist of 5 papers, It shall carry 120 marks. It shall be objective type with multiple choice and 3 hours duration.

| | | |
|---|---|---|
| a)Paper-I:- | i) Computer Literacy (qualifying examination only) | - 30 marks |
| b)Paper-II :- | ii) General Kannada | - 30 marks |
| | iii) General Knowledge | - 30 marks |
| | iv) Rural Development and Panchayath Raj | - 30 marks |
| | v) General English | - 30 marks |

Sd/-
(P.GOPIKRISHNA)
Assistant Secretary
Karnataka Public Service Commission.

ಅಬಕಾರಿ ಇಲಾಖೆಯ ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳು 1996 ಮತ್ತು ತಿದ್ದುಪಡಿ ನಿಯಮ 2008ರ ಅನ್ವಯ ಮಾಡಲಾಗುತ್ತದೆ.

**1. ಶೈಕ್ಷಣಿಕ ವಿದ್ಯಾರ್ಹತೆ:–**

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಯವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

**2. ವೇತನ ಶ್ರೇಣಿ :–**

8000–200–8600–225–9500–250–10500–300–12300–350–14400–400– 14800

3. **ವಯೋಮಿತಿ:–**ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು 21 ವರ್ಷ ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯನ್ನು ಈ ಕೆಳಕಂಡಂತೆ ಮೀರಿರಬಾರದು.

| | |
|---|---|
| **ಸಾಮಾನ್ಯ ವರ್ಗ** | 26 ವರ್ಷಗಳು |
| **ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳು** | 28 ವರ್ಷಗಳು |
| **ಮಾಜಿ ಸೈನಿಕರು** | ಸೈನಿಕರಾಗಿ ಸಲ್ಲಿಸಿರುವ ಸೇವೆಯನ್ನು ಸಡಿಲಿಸಿದ ವರ್ಷಗಳು ಅಥವಾ 38 ವರ್ಷಗಳು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು |

4. **ಶಾರೀರಿಕ ದಾರ್ಢ್ಯತೆ:–**

(ಅ) **ಶಾರೀರಿಕ ದಾರ್ಢ್ಯತೆಗೆ ಸಂಬಂಧಿಸಿದ ಷರತ್ತುಗಳು:–**

| | ಪುರುಷ ಅಭ್ಯರ್ಥಿಗಳಿಗೆ | ಮಹಿಳಾ ಅಭ್ಯರ್ಥಿಗಳಿಗೆ |
|---|---|---|
| (ಎ) ಎತ್ತರ | 163 ಸೆ. ಮೀ | 157 ಸೆ.ಮೀ. |
| (ಬಿ) ತೂಕ | -- | 49.9 ಕಿ.ಗ್ರಾಂ. |
| (ಸಿ) ಎದೆಯ ಅಳತೆ:– | ಎದೆಯ ಸುತ್ತಳತೆ 81 ಸೆ.ಮೀ.ಗಿಂತ ಕಡಿಮೆ ಇರಬಾರದು. ಪೂರ್ಣ ಉಸಿರು ಎಳೆದಾಗ 5 ಸೆ.ಮೀ.ಹೆಚ್ಚಳವಾಗಬೇಕು. | ಇದು ಮಹಿಳಾ ಅಭ್ಯರ್ಥಿಗಳಿಗೆ ಅನ್ವಯವಾಗುವುದಿಲ್ಲ. |

(ಆ) **<u>ದೃಷ್ಟಿ ಸಾಮರ್ಥ್ಯ:-</u>**

| **ದೂರದ ದೃಷ್ಟಿ** | | **ಹತ್ತಿರದ ದೃಷ್ಟಿ** | |
|---|---|---|---|
| **ದೋಷ ರಹಿತ ದೃಷ್ಟಿ** | **ದೋಷಪೂರಿತ ದೃಷ್ಟಿ** | **ದೋಷ ರಹಿತ ದೃಷ್ಟಿ** | **ದೋಷಪೂರಿತ ದೃಷ್ಟಿ** |
| 6/9 | 6/9 | 0/6 | 0/8 |
| ಅಥವಾ | | | |
| 6/9 | 6/12 | | |

ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳೆಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

## 5. <u>ನೇಮಕಾತಿ ವಿಧಾನ:</u>

ಕರ್ನಾಟಕ ಅಬಕಾರಿ ಸೇವೆಗಳು (ನೇಮಕಾತಿ) ನಿಯಮಗಳು 1996 ಮತ್ತು ಅದರ ತಿದ್ದುಪಡಿ ನಿಯಮಗಳಲ್ಲಿ, ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ) ನಿಯಮಗಳು 1978ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಅಬಕಾರಿ ಉಪ ನಿರೀಕ್ಷಕರ ಮತ್ತು ಅಬಕಾರಿ ರಕ್ಷಕರು (ಪುರುಷ) ಹಾಗೂ ಅಬಕಾರಿ ರಕ್ಷಕರು (ಮಹಿಳೆ) ಹುದ್ದೆಗಳಿಗೆ ಆಯೋಗವು ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಅಂಕಗಳ ಆಧಾರದ ಮೇಲೆ, ಮೀಸಲಾತಿ ನಿಯಮಗಳನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ದೇಹ ದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯದ ಪರೀಕ್ಷೆಗೆ ಕರೆಯಲಾಗುವುದು.

ದೈಹಿಕ ಸಾಮರ್ಥ್ಯದ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ, ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ, ಜೇಷ್ಠತೆಯನ್ನು ಮತ್ತು ಅಭ್ಯರ್ಥಿಗಳಿಂದ ಪಡೆಯಲಾದ ಜಿಲ್ಲಾವಾರು ಆದ್ಯತೆಯನ್ನು ಆಧರಿಸಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ.

**<u>ವಿಶೇಷ ಸೂಚನೆ:</u> ಈ ಮೇಲ್ಕಂಡ ಹುದ್ದೆಗಳ ಆಯ್ಕೆಗೆ ಮೌಖಿಕ ಪರೀಕ್ಷೆ ಇರುವುದಿಲ್ಲ.**

6. **<u>ಸ್ಪರ್ಧಾತ್ಮಕ ಪರೀಕ್ಷೆ:-</u>**

ಈ ಹುದ್ದೆಗಳ ನೇಮಕಾತಿಯನ್ನು ಕೆಳಕಂಡ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮೂಲಕ ಮಾಡಲಾಗುವುದು.

ಈ ಸ್ಪರ್ಧಾತ್ಮಕ ಪರೀಕ್ಷೆಯು ಪದವಿ ಮಟ್ಟದ್ದಾಗಿದ್ದು, <u>ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ.</u>

➡ **<u>ಪತ್ರಿಕೆ-1:-</u>** ಇದರಲ್ಲಿ ಎರಡು ಭಾಗಗಳಿರುತ್ತವೆ.

- **ಭಾಗ-1:-** ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಪ್ರಬಂಧ ಬರೆಯುವುದು. ಇದಕ್ಕೆ 30 ಅಂಕಗಳನ್ನು ನಿಗದಿಪಡಿಸಿರುತ್ತದೆ.
- **ಭಾಗ-2:-** ಕನ್ನಡದಿಂದ ಆಂಗ್ಲ ಭಾಷೆಗೆ ಮತ್ತು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರಿಸುವುದು. ಇದಕ್ಕೆ 20 ಅಂಕಗಳನ್ನು ನಿಗದಿಪಡಿಸಿರುತ್ತದೆ.

ಒಟ್ಟು 50 ಅಂಕಗಳ ಈ ಪತ್ರಿಕೆಯು **1½** ಗಂಟೆಗಳ ಕಾಲಾವಧಿ ಆಗಿರುತ್ತದೆ.

➨ **<u>ಪತ್ರಿಕೆ–2:–</u>**

**<u>ಸಾಮಾನ್ಯ ಅಧ್ಯಯನ:–</u>** ಇದರಲ್ಲಿ ಸಾಮಾನ್ಯ ಜ್ಞಾನ, ವಿಜ್ಞಾನ, ಭೂಗೋಳ, ಇತಿಹಾಸ, ಸಂವಿಧಾನ, ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಮತ್ತು ಸಾಮಾನ್ಯ ಮಾನಸಿಕ ಸಾಮಾರ್ಥ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿದ್ದು, ಇದಕ್ಕೆ 150 ಅಂಕಗಳನ್ನು ನಿಗದಿಪಡಿಸಿರುತ್ತದೆ. ಈ ಪತ್ರಿಕೆಯು "ವಸ್ತುನಿಷ್ಠ ಬಹು ಆಯ್ಕೆ" (Objective Multiple Choice type) ಮಾದರಿಯದಾಗಿದ್ದು, ಒಟ್ಟು ಒಂದೂವರೆ ಗಂಟೆ ಅವಧಿಯದಾಗಿರುತ್ತದೆ. ಯಾವುದೇ ಪತ್ರಿಕೆಗೆ ಕನಿಷ್ಠ ಅರ್ಹತಾ ಅಂಕಗಳನ್ನು ನಿಗದಿ ಪಡಿಸಿರುವುದಿಲ್ಲ. ಎರಡು ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಆಧರಿಸಿ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

## 14. <u>ದೈಹಿಕ ಅರ್ಹತಾ ಪರೀಕ್ಷೆ:–</u>

**ಅಬಕಾರಿ ಉಪನಿರೀಕ್ಷಕರು ಹುದ್ದೆಗಳ ಅಭ್ಯರ್ಥಿಗಳ ದೈಹಿಕ ಅರ್ಹತೆ, ದಾರ್ಢ್ಯತೆ ಮತ್ತು ಸಾಮರ್ಥ್ಯದ ಬಗ್ಗೆ ಈ ಕೆಳಕಂಡ ಪರೀಕ್ಷೆಗಳನ್ನು ನಡೆಸಲಾಗುವುದು.**

| ಕ್ರ.ಸಂ. | ಪುರುಷ | | | ಮಹಿಳೆ / ಮಾಜಿ ಸೈನಿಕ | |
|---|---|---|---|---|---|
| | ಅಂಶ (item) | ಅರ್ಹತಾ ಸಮಯ/ದೂರ | | ಅಂಶ (item) | ಅರ್ಹತಾ ಸಮಯ/ದೂರ |
| 7. | 100 ಮೀ. ಓಟ | 15 ಸೆಕೆಂಡುಗಳು | | 100 ಮೀ. ಓಟ | 18.5 ಸೆಕೆಂಡುಗಳು |
| 8. | ಎತ್ತರ ಜಿಗಿತ | 1.20 ಮೀಟರ್ | | ಎತ್ತರ ಜಿಗಿತ | 0.9 ಮೀಟರ್ |
| 9. | ಉದ್ದ ಜಿಗಿತ | 3.80 ಮೀಟರ್ | | ಉದ್ದ ಜಿಗಿತ | 2.50 ಮೀಟರ್ |
| 10. | ಗುಂಡಸೆತ(7.26 ಕೆ.ಜಿ) | 5.60 ಮೀಟರ್ | | ಗುಂಡೆಸೆತ (4 ಕೆ.ಜಿ) | 3.75 ಮೀಟರ್ |
| 11. | 800 ಮೀಟರ್ ಓಟ | 2 ನಿಮಿಷ 50 ಸೆಕೆಂಡುಗಳು | | 200 ಮೀಟರ್ ಓಟ | 40 ಸೆಕೆಂಡುಗಳು |

- ➨ ಅಭ್ಯರ್ಥಿಗಳು ಮೇಲಿನ 5 ದೈಹಿಕ ಸಾಮರ್ಥ್ಯಗಳ ಪೈಕಿ 3 ರಲ್ಲಿ ಉತ್ತೀರ್ಣರಾಗಬೇಕು.
- ➨ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಕೇವಲ ಅರ್ಹತಾದಾಯಕ ಪರೀಕ್ಷೆಯಾಗಿರುತ್ತದೆ.
- ➨ ಆಯೋಗವು ಈ ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ನೇತೃತ್ವಗೊಂಡ ಸಮಿತಿಯು ನಡೆಸುವುದು. ಈ ಸಮಿತಿಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಜಿಲ್ಲಾ ಯುವಜನ ಸೇವಾ ಅಧಿಕಾರಿಗಳು ಸದಸ್ಯರಾಗಿರುತ್ತಾರೆ ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು (ಅಬಕಾರಿ) ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಕರ್ನಾಟಕ ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ (ವಿಶೇಷ) (ನೇಮಕಾತಿ) ನಿಯಮಗಳು, 2009 ರನ್ವಯ ಮಾಡಲಾಗುತ್ತದೆ.

**1. ಶೈಕ್ಷಣಿಕ ವಿದ್ಯಾರ್ಹತೆ:–**

ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ಸರ್ಕಾರವು ಅಂತಹ ಪರೀಕ್ಷೆಗೆ ಸಮಾನವೆಂದು ಅಂಗೀಕರಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು.

**ಟಿಪ್ಪಣಿ: ಡಿಪ್ಲೊಮಾ, ಹಿಂದಿ ಸಭಾಗಳಿಂದ ಪಡೆದ ರತ್ನಾ, ವಿಶಾರದ, ಪಂಡಿತ್ ಇತ್ಯಾದಿ ವಿದ್ಯಾರ್ಹತೆಗಳು ಪದವಿಗೆ ಸಮಾನವಾಗುವುದಿಲ್ಲ. ಆದ್ದರಿಂದ ಈ ವಿದ್ಯಾರ್ಹತೆಯ ಅಭ್ಯರ್ಥಿಗಳು ಸದರಿ ಹುದ್ದೆಗೆ ಅರ್ಹರಾಗುವುದಿಲ್ಲ.**

**ಸೂಚನೆ:– ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.**

2. ವೇತನ ಶ್ರೇಣಿ : ₹ 10000–250–10500–300–12300–350–14400–400–16800–450–18150.

3. ವಯೋಮಿತಿ:– ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು

ಅ) ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು

ಆ) ಗರಿಷ್ಠ ವಯೋಮಿತಿ :

| | |
|---|---|
| **ಸಾಮಾನ್ಯ ವರ್ಗ** | **35 ವರ್ಷ** |
| **2ಎ,2ಬಿ,3ಎ,3ಬಿ** | **38 ವರ್ಷ** |
| **ಪ.ಜಾ/ಪ.ಪಂ/ಪ್ರ–1** | **40 ವರ್ಷ** |

4. **ಅರ್ಹತಾ ಮತ್ತು ಸ್ಪರ್ಧಾತ್ಮಕ ಪರೀಕ್ಷೆ:–** ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ (ವಿಶೇಷ) (ನೇಮಕಾತಿ) ನಿಯಮಗಳು, 2009ರನ್ವಯ ನಡೆಸುವ ಈ ಪರೀಕ್ಷೆಯು ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪತ್ರಿಕೆಯಾಗಿದ್ದು ಒಟ್ಟು 150 ಅಂಕಗಳಿಗೆ 3 ಗಂಟೆಗಳ ಕಾಲಾವಧಿಯನ್ನು ನಿಗದಿಪಡಿಸಿದೆ. ಹಾಗೂ ಈ ಹುದ್ದೆಗಳಿಗೆ ಕೆಳಗೆ ನಮೂದಿಸಿರುವಂತೆ ಅರ್ಹತಾ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗುವುದು.

**<u>ಭಾಗ – 1 : ಅರ್ಹತಾ ಪರೀಕ್ಷೆ</u>**

| | | |
|---|---|---|
| (ಕಂಪ್ಯೂಟರ್ ಸಾಕ್ಷರತೆ) | – | 30 ಅಂಕಗಳು |

**<u>ಭಾಗ – 2 : ಸ್ಪರ್ಧಾತ್ಮಕ ಪರೀಕ್ಷೆ</u>**

| | | |
|---|---|---|
| 1) ಸಾಮಾನ್ಯ ಕನ್ನಡ | – | 30 ಅಂಕಗಳು |
| 2) ಸಾಮಾನ್ಯ ಜ್ಞಾನ | – | 30 ಅಂಕಗಳು |
| 3) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | – | 30 ಅಂಕಗಳು |
| 4) ಸಾಮಾನ್ಯ ಇಂಗ್ಲೀಷ್ | – | 30 ಅಂಕಗಳು |

**11. <u>ನೇಮಕಾತಿ ವಿಧಾನ</u>:–**

ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇಕಡಾ 35 ಅಂಕಗಳನ್ನು ಗಳಿಸತಕ್ಕದ್ದು. ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿನ ಅರ್ಹತೆ ಆಧರಿಸಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜೇಷ್ಠತೆ ಮತ್ತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನುಸಾರ ಆಯ್ಕೆ ಮಾಡಲಾಗುವುದು, ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇಕಡಾ 35 ಅಂಕಗಳನ್ನು ಪಡೆಯದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಕಂಪ್ಯೂಟರ್ ಸಾಕ್ಷರತಾ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಜೇಷ್ಠತಾ ಅಂಕಗಳಿಗೆ ಪರಿಗಣಿಸಲಾಗುವುದಿಲ್ಲ. ಭಾಗ–2ರಲ್ಲಿನ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಟ್ಟು 120 ಅಂಕಗಳಿಗೆ ಗಳಿಸಿರುವ ಅಂಕಗಳನ್ನು ಮಾತ್ರ ಜೇಷ್ಠತೆಗೆ ಪರಿಗಣಿಸಲಾಗುವುದು.

**<u>ವಿಶೇಷ ಸೂಚನೆ</u>:– ಈ ಹುದ್ದೆಗಳ ನೇರ ನೇಮಕಾತಿಗಾಗಿ ಯಾವುದೇ ವಿಧವಾದ ಸಂದರ್ಶನ ಇರುವುದಿಲ್ಲ.**